**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

*******************************************************************************

**ಪ್ರಶ್ನೆ:**

ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿ ಹಾಗೂ ನರಸಾಪುರ ಹೋಬಳಿ, ಕುರ್ಕಿ ಗ್ರಾಮದ ಸರ್ವೆ ನಂ. 141 ರಲ್ಲಿ ಕಲ್ಲು ಗಣಿಗಾರಿಕೆ ಮಾಡಲು ಬೆಂಗಳೂರಿನ ಕೆಲವು ಪ್ರಭಾವಿಗಳು ಪ್ರಯತ್ನಿಸುತ್ತಿದ್ದು, ಅಕ್ಕ ಪಕ್ಕದ ಜಮೀನುದಾರರ ಅನುಮತಿಯಿಲ್ಲದೆ, ಇಟಾಚಿ, ಜೆಸಿಬಿ, ಇತ್ಯಾದಿ ಬೃಹತ್ ಯಂತ್ರಗಳಿಂದ ಜಮೀನುಗಳಲ್ಲಿ ದೌರ್ಜನ್ಯವಾಗಿ ರಸ್ತೆ ನಿರ್ಮಿಸಲು ಮುಂದಾಗಿರುತ್ತಾರೆ. ಇವರುಗಳ ವಿರುದ್ಧ ಗ್ರಾಮಸ್ಥರು ಪೊಲೀಸರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಈ ಕಲ್ಲು ಗಣಿಗಾರಿಕೆಯು ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್-75) ಗೆ ಬಹಳ ಹತ್ತಿರದಲ್ಲಿದ್ದು ಹಾಗೂ ಕುರ್ಕಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 141 ರಲ್ಲಿ ಅರಣ್ಯ ಬೆಳೆಸುವ ಉದ್ದೇಶಕ್ಕೆ 246 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ ಮತ್ತು ಸದರಿ ಜಾಗದ ಅಕ್ಕ ಪಕ್ಕದ ಜಮೀನುಗಳಲ್ಲಿ ವಾಣಿಜ್ಯ ಬೆಳೆ ಎಂದರೆ ಟಮೋಟ, ಆಲೂಗಡ್ಡೆ ಮತ್ತು ಇತರೆ ಬೆಳೆಗಳನ್ನು ಬೆಳೆಯುವ ಜಮೀನುಗಳಿದ್ದು, ಇವರೊಂದಿಗೆ ರೇಷ್ಮೆ ಸಾಕಾಣಿಕೆಯ ಮನೆಗಳು, ಕೋಳಿ ಫಾರಂ ಇತ್ಯಾದಿಗಳನ್ನು ಹೊಂದಿರುವ ರೈತರು ಇದ್ದರೂ ಸಹ ಇವರುಗಳ ಗಮನಕ್ಕೆ ಬಾರದೆ ಅಕ್ಕ ಪಕ್ಕದ ರೈತರ ಅನುಮತಿಯನ್ನು ಕೇಳದೆ ಮತ್ತು ಸ್ಥಳ ತನಿಖೆ ಮಾಡದೇ ಅವರುಗಳ ಸಹಿಗಳನ್ನು ಫೋರ್ಜರಿ ಮಾಡಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಅಕ್ರಮ ಗಣಿಗಾರಿಕೆ ಪರವಾನಗಿ ಪಡೆದುಕೊಂಡು ಈ ಸ್ಥಳದಲ್ಲಿ ಕ್ರಷರ್ (ಕಲ್ಲು ಪುಡಿ ಮಾಡುವ ಘಟಕ) ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ಇದಲ್ಲದೆ ಕೆಂದಟ್ಟಿ ಗೊಲ್ಲಹಳ್ಳಿಗೆ ಸೇರಿದ ಸರ್ವೆ ನಂ. 23ಕ್ಕೆ ಹೊಂದಿಕೊಂಡತ್ತಿರುವ ಕುರ್ಕಿ ಗ್ರಾಮಕ್ಕೆ ಸೇರಿದ ಸರ್ವೆ ನಂ.141 ರಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಗೆ 5.00 ಎಕರೆ ಜಮೀನು ಸಹ ಮಂಜೂರಾಗಿರುತ್ತದೆ. ಇದರೊಂದಿಗೆ ಸಣ್ಣ ನೀರಾವರಿ ಇಲಾಖೆಗೆ ಸೇರಿದ 2 ಅಂತಸ್ತಿನ ಸರ್ಕಾರಿ ಕಟ್ಟಡ ಹಾಗೂ ವ್ಯಾಲಿ ಪಬ್ಲಿಕ್ ಖಾಸಗಿ ಶಾಲೆಯು ಸಹ ಇರುತ್ತದೆ.

ದಿನಾಂಕ 20.05.2011 ರಂದು ಕೆಂದಟ್ಟಿ ಗೊಲ್ಲಹಳ್ಳಿ ಸರ್ವೆ ನಂ. 23 ರಲ್ಲಿರುವ ಕಲ್ಲು ಗಣಿಗಾರಿಕೆಗಾಗಿ ಅಕ್ರಮವಾಗಿ ನೀಡಿರುವ ಪರವಾನಗಿಯನ್ನು ರದ್ದುಪಡಿಸಿ, ದಿನಾಂಕ 19.08.2021 ರಂತೆತೆ ಮೆ|| ಗೋಂಡವನ ಸ್ಟೋನ್ ಸಂಸ್ಥೆಗೆ ವರ್ಗಾವಣೆಗೊಂಡಿರುವ ಪರವಾನಗಿಯನ್ನು ಸಹ ರದ್ದುಪಡಿಸಿ, ಇದರೊಂದಿಗೆ ಅಕ್ರಮ ಗಣಿಗಾರಿಕೆ ಮಂಜೂರಾತಿಗೆ ಸಹಕರಿಸಿದ ಎಲ್ಲಾ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕಾಗಿರುವುದರಿಂದ ಈ ವಿಷಯವನ್ನು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

## ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಿರುವ ಕುರಿತು ಮಾಹಿತಿ:-

ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿನ ಸರ್ಕಾರಿ ಗೋಮಾಳ ಜಮೀನಿನ 07-00 ಎಕರೆ ಪ್ರದೇಶದಲ್ಲಿ ಶ್ರೀಮತಿ ಎಂ. ಸುನಿತಾಕುಮಾರಿ ಎಂಬುವವರಿಗೆ ದಿನಾಂಕ 26.05.2011 ರಿಂದ ಐದು ವರ್ಷಗಳ ಅವಧಿಗೆ ಜಾರಿಗೆ ಬರುವಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು ಹಾಗೂ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರಿಂದ ದಿನಾಂಕ 25.11.2019 ರಂದು ಪರಿಸರ ಅನುಮತಿ ಪತ್ರವನ್ನು ಪಡೆದು ಕಲ್ಲುಗಣಿ ಗುತ್ತಿಗೆ ಸಂಖ್ಯೆ 991ನ್ನು ಮಂಜೂರು ಮಾಡಲಾಗಿರುತ್ತದೆ.

ಕಲ್ಲುಗಣಿ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಸಂಖ್ಯೆ 991ನ್ನು ಕನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 19-A ರಂತೆ ಮೆ|| ಗೊಂಡ್ವಾನ ಸ್ಟೋನ್ಸ್ ಎಲ್.ಎಲ್.ಪಿ ಎಂಬ ಸಂಸ್ಥೆಗೆ ವರ್ಗಾವಣೆ ಕೋರಿ ಮನವಿ ಸಲ್ಲಿಸಿದ್ದು, ನಿಯಮಗಳನುಸಾರ ದಿನಾಂಕ 19.08.2021 ರಂದು ವರ್ಗಾಯಿಸಲಾಗಿರುತ್ತದೆ.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 6(2) ರಂತೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 991ರ 200 ಮೀಟರ್ ಅಂತರದ ಒಳಗೆ ಯಾವುದೇ ಸಾರ್ವಜನಿಕ ರಚನೆಗಳು ಇರುವುದಿಲ್ಲ. ಸದರಿ ಕಲ್ಲುಗಣಿ ಗುತ್ತಿಗೆಯಿಂದ ಗ್ರಾಮ ಮತ್ತು ಶಾಲೆ 450ಮೀಟರ್, ರಾಷ್ಟ್ರೀಯ ಹೆದ್ದಾರಿ 410 ಮೀಟರ್, ಸಣ್ಣನೀರಾವರಿ ಇಲಾಖೆಗೆ ಸೇರಿದ ಸರ್ಕಾರಿ ಕಟ್ಟಡ 530 ಮೀಟರ್ ಹಾಗೂ ವ್ಯಾಲಿ ಪಬ್ಲಿಕ್ ಖಾಸಗಿ ಶಾಲೆ 600 ಮೀಟರ್ ಅಂತರದಲ್ಲಿರುತ್ತವೆ. ಕಾರ್ಮಿಕರ ರಾಜ್ಯ ವಿಮಾಯೋಜನೆ ವೈಧ್ಯಕೀಯ ಆಸ್ಪತ್ರೆ ಸ್ಥಾಪಿಸಲು ಉದ್ದೇಶಿಸಿ ಜಮೀನು ಮಂಜೂರಾತಿಯಾಗಿರುವ ಮಾಹಿತಿಯು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಇರುವುದಿಲ್ಲ.

ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕುರ್ಕಿ ಗ್ರಾಮದ ಸರ್ವೆ ನಂ. 141ರಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಗಾಗಿ ಶ್ರೀಮತಿ ಆರ್.ಮಂಜುಳ ರವರಿಗೆ ದಿನಾಂಕ 26.02.2007 ರಿಂದ 05 ವರ್ಷಗಳ ಅವಧಿಗೆ ಜಾರಿಗೆ ಬರುವಂತೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 829 ನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ 25.02.2012 ರಂದು ಮುಕ್ತಾಯಗೊಂಡಿದ್ದು, ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಅವಧಿಯನ್ನು ನವೀಕರಿಸಲು ಅರ್ಜಿ ಸಲ್ಲಿಸದ ಕಾರಣ ಸದರಿ ಗುತ್ತಿಗೆಯನ್ನು ಕೊನೆಗಾಣಿಸಲಾಗಿದ್ದು, ಪ್ರಸ್ತುತ, ಅವಧಿ ಮುಕ್ತಾಯವಾದ ಗುತ್ತಿಗೆಯಾಗಿರುತ್ತದೆ. ಪ್ರಸ್ತುತ ಸದರಿ ಗುತ್ತಿಗೆಯಲ್ಲಿ ಕಲ್ಲು ಗಣಿಗಾರಿಕೆ ಸ್ಥಗಿತಗೊಂಡಿರುತ್ತದೆ. ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23ರಲ್ಲಿನ ಜಮೀನಿನಲ್ಲಿ ಅಥವಾ ಅಕ್ಕಪಕ್ಕದ ಜಮೀನಿನಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆದಿರುವುದಿಲ್ಲ.

**ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ಲೈಸೆನ್ಸ್ ವಿತರಿಸುವ ಕುರಿತು ಮಾಹಿತಿ:-**

ಶ್ರೀಮತಿ ಸುನಿತಾಕುಮಾರಿ ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರ 02-00 ಎಕರೆ ಪ್ರದೇಶದಲ್ಲಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್) ನಿಯಂತ್ರಣ ಅಧಿನಿಯಮ, 2011 ಮತ್ತು ನಿಯಮಗಳು, 2012 ರಂತೆ ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ದಿನಾಂಕ 06.07.2019 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ಅರ್ಜಿಗೆ ಸಂಬಂಧಿಸಿದಂತೆ ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸದಸ್ಯ ಅಧಿಕಾರಿಗಳ ತಂಡದಿಂದ ದಿನಾಂಕ 11.12.2019 ರಂದು ಜಂಟಿ ಸ್ಥಳ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯನುಸಾರ ಕಲಂ-6 ರಲ್ಲಿ ನಿಗದಿಪಡಿಸಿರುವಂತೆ ಸುರಕ್ಷಿತ ವಲಯ ಘೋಷಣೆಗೆ ಅಗತ್ಯವಿರುವ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಕಾರಣ ದಿನಾಂಕ 22.03.2021 ರಂದು ನಡೆದ ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯಲ್ಲಿ ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗಾಗಿ ಸುರಕ್ಷತೆ ವಲಯ ಘೋಷಿಸಲು ಅನುಮೋದಿಸಲಾಗಿರುತ್ತದೆ.

. . . 3

ಅದರಂತೆ ದಿನಾಂಕ 26.04.2021ರಂದು ಸದರಿ ಪ್ರದೇಶವನ್ನು ಸುರಕ್ಷಿತ ವಲಯವೆಂದು ಘೋಷಿಸಿ ಗೆಜೆಟ್ ನಲ್ಲಿ ಪ್ರಕಟಿಸಲಾಗಿರುತ್ತದೆ. ಅರ್ಜಿದಾರರು ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Establishment (CFE) ಪಡೆದು ಸಲ್ಲಿಸಿದ್ದು, ಪ್ರಸ್ತುತ ಸ್ಟೋನ್ ಕ್ರಷರ್ ಘಟಕವನ್ನು ಸ್ಥಾಪಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಸದರಿ ಸ್ಟೋನ್ ಕ್ರಷರ್ ಘಟಕದಿಂದ ಗ್ರಾಮ ಮತ್ತು ಶಾಲೆ 516 ಮೀಟರ್, ದೇವಸ್ಥಾನ 825 ಮೀಟರ್, ಕೆರೆ 250 ಮೀಟರ್ ರಾಷ್ಟ್ರೀಯ ಹೆದ್ದಾರಿ 211 ಮೀಟರ್, ರಾಜ್ಯ ಹೆದ್ದಾರಿ 805 ಮೀಟರ್, ಸಣ್ಣನೀರಾವರಿ ಇಲಾಖೆಗೆ ಸೇರಿದ ಸರ್ಕಾರಿ ಕಟ್ಟಡ 445 ಮೀಟರ್ ಹಾಗೂ ವ್ಯಾಲಿ ಪಬ್ಲಿಕ್ ಖಾಸಗಿ ಶಾಲೆ 520 ಮೀಟರ್ ಅಂತರದಲ್ಲಿರುತ್ತವೆ. ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಆಸ್ಪತ್ರೆ ಸ್ಥಾಪಿಸಲು ಉದ್ದೇಶಿಸಿ ಜಮೀನು ಮಂಜೂರಾತಿಯಾಗಿರುವ ಮಾಹಿತಿಯು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಇರುವುದಿಲ್ಲ.

ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿ ಸ್ಟೋನ್ ಕ್ರಷರ್ ಸ್ಥಾಪನೆಗೆ ಸುರಕ್ಷಿತ ವಲಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ದಿನಾಂಕ 26.04.2021 ರಂದು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆ ಪ್ರಕಟಣೆಗೊಂಡ ನಾಲ್ಕು ತಿಂಗಳುಗಳ ನಂತರ ಸಣ್ಣ ನೀರಾವರಿ ಇಲಾಖೆಯ ಕಟ್ಟಡ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011ರ ಕಲಂ 6(3) ರಂತೆ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಜನವಸತಿ, ಶಾಲೆ, ದೇವಾಲಯಗಳು ಅಥವಾ ರಸ್ತೆಯು ಸುರಕ್ಷಿತ ವಲಯದ ಘೋಷಣೆಯ ಆನಂತರ ಬಂದರೆ, ಅಂಥ ಘೋಷಣೆಯ ಕಾರ್ಯಾಚರಣೆ ಅಥವಾ ಮುಂದುವರಿಕೆಗೆ ಪರಿಣಮಿಸತಕ್ಕದ್ದಲ್ಲ ಎಂದಿರುತ್ತದೆ.

ಪ್ರಸ್ತುತ, ಸದರಿ ಪ್ರದೇಶದಲ್ಲಿ ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ಸುರಕ್ಷಿತ ವಲಯದ ಘೋಷಣೆ ಮಾಡಿದ್ದು, ಕಾಯ್ದೆ ಮತ್ತು ನಿಯಮಗಳನುಸಾರ ಪರಿಶೀಲಿಸಿ ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಸ್ಟೋನ್ ಕ್ರಷರ್ ಕಾರ್ಯಾಚರಣೆಗೆ ಲೈಸೆನ್ಸ್ ಮಂಜೂರು ಮಾಡಲು ಕ್ರಮವಹಿಸಲಾಗುತ್ತದೆ.

ಸಂಖ್ಯೆ ಸಿಐ-ಎಂಎಂಎನ್/382/2022

Halappa B

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.